ಮೇಲೆಯೇ ಅದನ್ನು ಮಾಡಿದ್ದುದು. ನಿಮಗೆ ನಮ್ಮ ಹೇಳಿಕೆಯ ಮೇಲೆ ನಂಬಿಕೆ ಇಲ್ಲ. ನಾವು ಹೇಳಿದ್ದು ಸತ್ಯಕ್ಕೆ ದೂರವಾದುದು ಎಂದು ನಿಮಗೆ ಮನವರಿಕೆ ಆಗಿತ್ತು. ಈ ಸದನದಲ್ಲಿ ಮಂಡಿಸಿ ಈ ಪ್ರಕರಣ ಸಿ.ಬಿ.ಐ. ತನಿಖೆಯಾಗಬೇಕೆಂದು ಸಲಹೆ ಕೊಟ್ಟಿದ್ದಾರೆ, ಎರಡೂ ಸರ್ಕಾರಿ ಆದೇಶಗಳ ಮೇಲೆ ಎನ್‌ಕ್ವೈರಿ ಮಾಡಲು ಸಿ.ಬಿ.ಐ.ಗೆ ಒಪ್ಪಿಸಿ ಎಂದು ಸಮಿತಿ ಶಿಫಾರಸ್ಸು ಮಾಡಿದೆ. ಎವಿಡೆನ್ಸ್ ರೂಪದಲ್ಲಿ ಡಾಕ್ಯುಮೆಂಟ್ ಇದೆ, ಸಿ.ಬಿ.ಐ.ಗೆ ಒಪ್ಪಿಸಬೇಕೆಂಬ ಸಲಹೆಯೂ ಕೂಡ ಬಂದಿರುವಾಗ ಸರ್ಕಾರ ಇದಕ್ಕೆ ಒಪ್ಪಲೇಬೇಕು. ಇಷ್ಟೆಲ್ಲಾ ಇದ್ದರೂ ಕೂಡ ಸರ್ಕಾರದವರು ಸಿ.ಬಿ.ಐ.ಗೆ ರೆಫರ್ ಮಾಡುವುದಕ್ಕೆ ತಯಾರಾಗಿಲ್ಲ ಎಂದರೆ ಹೇಗೆ? ನೀವು ಪದೇ ಪದೇ ಸಿ.ಬಿ.ಐ ಮೇಲೆ ಪ್ರೀತಿ ಇಡತಕ್ಕವರಲ್ಲವೇ? 2 ಕೋಟಿ ರೂ.ಗಳಿಗೆಲ್ಲಾ ಸಿ.ಬಿ.ಐ.ಗೆ ರೆಫರ್ ಮಾಡಿದ್ದೀರಿ. ಜಾಲಪ್ಪನವರದ್ದು ರೆಫರ್ ಮಾಡಿದ್ದಿರಿ. ಇದೂ ಕೂಡ ರೆಫರ್ ಆಗಲಿ.

(ಮಾನ್ಯ ವಿರೋಧ ಪಕ್ಷದ ನಾಯಕರು ಪುನಃ ಸದನದ ಬಾವಿಯಲ್ಲಿ ಧರಣಿ ನಿಂತರು)

ಶ್ರೀ ಕೆ.ಎನ್. ನಾಗೇಗೌಡ : ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳು ಬೆಳಿಗ್ಗೆ ತಮ್ಮ ಮುಖಂಡತ್ವದಲ್ಲಿಯೇ ಎಲ್ಲಾ ಪಕ್ಷದ ಮುಖಂಡರು ಹೋಗಿ ಸ್ಥಳಕ್ಕೆ ಭೇಟಿ ನೀಡಲಿ. ಇದರ ಬಗ್ಗೆ ಹೆಚ್ಚು ಚರ್ಚೆ ಮಾಡಿ ಕೆಲಸ ಹಾಳಾಗುವುದು ಬೇಡ ಎಂದು ಹೇಳಿ ಮಾನ್ಯ ಮುಖ್ಯಮಂತ್ರಿಗಳು ಎಲ್ಲರನ್ನೂ ಅಲ್ಲಿಗೆ ಭೇಟಿ ನೀಡುವ ಸಲುವಾಗಿ ಆಹ್ವಾನಿಸಿದ್ದಾರೆ. ತಾವು ಒಂದು ದಿನಾಂಕ ನಿಗದಿ ಮಾಡಿ, ಆ ಸ್ಥಳಕ್ಕೆ ಭೇಟಿ ನೀಡೋಣ. ಅಲ್ಲಿಗೇ ಭೇಟಿ ನೀಡಿ ಪ್ರತಿಯೊಂದನ್ನೂ ಕೂಡ ಹೋಗಿ ನೋಡಿಕೊಂಡು ಬರೋಣ. ಅಲ್ಲಿ ನಡೆದಿರುವ ಕೆಲಸಗಳನ್ನು ನೋಡಿದರೆ ಅವರು ಖಂಡಿತವಾಗಿಯೂ ಕನ್‌ವಿನ್ಸ್ ಆಗುತ್ತಾರೆ. ಅವರು ಅದನ್ನು ನೋಡದಿರುವುದರಿಂದ ಕನ್‌ವಿನ್ಸ್ ಆಗುತ್ತಿಲ್ಲ. ಸರ್ಕಾರ ಕೆಲಸ ಕೊಡಬೇಕೆಂದು ಒಂದು ತೀರ್ಮಾನ ತೆಗೆದುಕೊಂಡು ಪ್ರೊಸಿಸೀಜರ್ ಅಡಾಪ್ಟ್ ಮಾಡಿಕೊಂಡು ಸರ್ಕಾರಿ ಆದೇಶ ಹೊರಡಿಸಿ ಗುತ್ತಿಗೆಗಳನ್ನು ಕೊಟ್ಟಿದ್ದೇವೆ.

ಅಧ್ಯಕ್ಷರು : ನಿಮ್ಮಲ್ಲಿ ನಾನು ಇಷ್ಟೇ ವಿನಂತಿ ಮಾಡಿಕೊಳ್ಳುತ್ತೇನೆ, ನಾವು ಇನ್ನೂ ಲ್ಯಾಂಡ್ ರೆವಿನ್ಯೂ ಬಿಲ್ ಒಂದನ್ನು ಚರ್ಚೆಗೆ ತೆಗೆದುಕೊಳ್ಳಬೇಕಾಗಿದೆ, ಇದೊಂದು ಬಹಳ ಪ್ರಮುಖ್ಯವಾದ ವಿಧೇಯಕ. ಕೃಷಿ ಇಲಾಖೆಯ ಬೇಡಿಕೆಗಳ ಮೇಲಿನ ಚರ್ಚೆಗೆ ಸರ್ಕಾರದಿಂದ ಉತ್ತರ ನೀಡಬೇಕಾಗಿದೆ. ಸಂಬಂಧಪಟ್ಟ ಮಾನ್ಯ ಮಂತ್ರಿಗಳು ಅದಕ್ಕಾಗಿ ಕಾಯುತ್ತಿದ್ದಾರೆ. ಸಿ.ಬಿ.ಐ. ಸ್ಯಾಕ್ರೋಸ್ಯಾಂಟ್ ಎಂದು ಏಕೆ ತಿಳಿದುಕೊಳ್ಳುತ್ತೀರಿ? Sri Moily, you just think over whether should you stick to this stand or would you reconsider this. It is only to carry on the business. But, for that, we don't have any other interest.

ಶ್ರೀ ಎಂ.ಸಿ. ನಾಣಯ್ಯ : ಮಾನ್ಯ ಸಭಾಧ್ಯಕ್ಷರೆ ನಾನು ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತು ಇತರೇ ಸದಸ್ಯರಲ್ಲಿ ಕೇಳಿಕೊಳ್ಳುತ್ತಿದ್ದೇನೆ, ತಾವು ಈ ವಿಚಾರವನ್ನು ಸಮಗ್ರವಾಗಿ ಚರ್ಚೆ ಮಾಡಿದ್ದೀರಿ. ಈ ಹಿಂದೆ ಕೂಡ ಇದರ ಬಗ್ಗೆ ಚರ್ಚೆ ಮಾಡಿದ್ದೀರಿ. ತಾವೇ ಹೇಳಿದ ಹಾಗೆ